# ಅಂಶ - 17 ನಡುಗನ್ನಡ ಸಾಹಿತ್ಯ

**ವಿಷಯಕ್ರಮ**


17.0 ಉದ್ದೇಶ

17.1 ಪೀಠಿಕೆ

17.2 ಪಠ್ಯ-1 ವಚನಗಳು

17.2.1 ಪ್ರಭುದೇವರ ವಚನಗಳು

17.2.2 ಬಸವೇಶ್ವರ ವಚನಗಳು

**ಅಭ್ಯಾಸ-1**

17.3 ಪಠ್ಯ-2 ಪುರಂದರ ದಾಸರ ಕೀರ್ತನೆಗಳು

**ಅಭ್ಯಾಸ** -2

17.4 ಸಾರಾಂಶ

**ಅಭ್ಯಾಸಗಳಿಗೆ ಉತ್ತರಗಳು**


## 17.0 ಉದ್ದೇಶ

- ಈ ಪಾಠವನ್ನು ಓದುವುದರಿಂದ ನಡುಗನ್ನಡ ಸಾಹಿತ್ಯದ ವಿಶಿಷ್ಟ ಪ್ರಕಾರಗಳಾವುವು ಎಂಬುದು ನಿಮಗೆ ತಿಳಿಯುತ್ತದೆ.
- ಇಂಥ ಸಾಹಿತ್ಯಪ್ರಕಾರಗಳು ನಿರ್ಮಾಣವಾಗುವುದಕ್ಕೆ ಹಿನ್ನೆಲೆಯೇನೆಂಬುದು ನಿಮಗೆ ಗೊತ್ತಾಗುವುದು.
- ಆ ಸಾಹಿತ್ಯಪ್ರಕಾರಗಳ ರಚನಾ ವೈಶಿಷ್ಟ್ಯವೇನೆಂಬುದು ತಿಳಿಯುವುದು.
- ಅವುಗಳಲ್ಲಿ ಹುದುಗಿರುವ ಕಾವ್ಯಶಕ್ತಿ ವಿಚಾರಶಕ್ತಿಯೇನೆಂಬುದರ ಪರಿಚಯವಾಗುವುದು.
- ಅವುಗಳ ಭಾಷಾ ವೈಲಕ್ಷಣ್ಯಗಳೇನೆಂಬುದು ನಿಮಗೆ ಮನವರಿಕೆಯಾಗುವುದು.
- ಅವು ಭಾರತೀಯ ಸಾಹಿತ್ಯದಲ್ಲೇ ಹೇಗೆ ವಿಶಿಷ್ಟವಾಗಿವೆ ಎಂಬುದರ ಕಲ್ಪನೆ ನಿಮಗಾಗುವುದು.

## 17.1 ಪೀಠಿಕೆ

ಲಿಖಿತ ಕನ್ನಡ ಸಾಹಿತ್ಯವನ್ನು ಭಾಷಾ ದೃಷ್ಟಿಯಿಂದ ಹಳಗನ್ನಡ, ನಡುಗನ್ನಡ, ಹೊಸಗನ್ನಡ ಸಾಹಿತ್ಯಗಳೆಂದು ವಿಭಾಗಿಸುವುದುಂಟು. ವಚನ ಸಾಹಿತ್ಯ ದಾಸ ಸಾಹಿತ್ಯ ನಡುಗನ್ನಡದ ವಿಶಿಷ್ಟ ಸಾಹಿತ್ಯ ಪ್ರಕಾರಗಳು. ವಚನ ಎಂದರೆ ಮಾತು, ನುಡಿ ಎಂದರ್ಥ. ಸಾಹಿತ್ಯ ಪದ್ಯ ಭೂಯಿಷ್ಠವಾಗಿ ಕ್ಲಿಷ್ಟವಾಗಿ ಪಂಡಿತರ ಸೊತ್ತಾಗಿದ್ದ ಸಮಯದಲ್ಲಿ ಹನ್ನೆರಡನೆಯ ಶತಮಾನದ ಶಿವಶರಣರು ಧಾರ್ಮಿಕ ಸಾಮಾಜಿಕ, ತಾತ್ವಿಕ ಹಾಗೂ ಸಾಹಿತ್ಯಿಕ ಕ್ಷೇತ್ರದಲ್ಲಿ ಅದ್ಭುತ ಕ್ರಾಂತಿಯನ್ನೆಸಗಿದರು ಬಡವ - ಬಲ್ಲಿದ, ಆಳು - ಅರಸ, ಜಾತಿ - ಮತ, ಉಚ್ಚ - ನೀಚ ಎಂಬ ವಿಷಮತೆಯನ್ನು ಕಿತ್ತು ಬಿಸುಟು, ಸಮತೆ - ಶಾಂತಿ, ಬಂಧುತ್ವದಂತಹ ವಿಶಾಲ ತತ್ವಗಳ ತಳಹದಿಯ ಮೇಲೆ ನೂತನ ಸಮಾಜವನ್ನು ಕಟ್ಟಲು ಯತ್ನಿಸಿದರು. ನಿತ್ಯನೂತನ ಮಥನ ಕ್ರಿಯೆಯಲ್ಲಿ ಹೊರಹೊಮ್ಮಿ ಬಂದಿದೆ ಈ ವಚನ ಸಾಹಿತ್ಯ. ಈ ಸಾಮಾಜಿಕ ಕ್ರಾಂತಿಯ ಕೇಂದ್ರ ಬಿಂದು ಶ್ರೀಸಾಮಾನ್ಯನಾದುದರಿಂದ ಅವನಿಗೆ ತಿಳಿಯುವ ರೀತಿಯಲ್ಲಿ ಅವನ ಅನಿಸಿಕೆ, ಭಾವ, ವಿಚಾರ, ಅವನ ಆತ್ಮೋದ್ಧಾರ ಈ ಸಾಹಿತ್ಯದ ಮೂಲಸ್ಥಾಯಿಯಾಯಿತು. ಆದುದರಿಂದ ಶ್ರೀ ಸಾಮಾನ್ಯನ ಮಾತಿನ ಶೈಲಿ ವಚನವಾಯಿತು. ಈ ಕ್ರಾಂತಿಯಲ್ಲಿ ಜಾತಿ ಭೇದವಿಲ್ಲದೆ, ಗಂಡು ಹೆಣ್ಣೆನ್ನದೆ, ಬಡವ ಬಲ್ಲಿದರೆನ್ನದೆ ಎಲ್ಲರೂ ಭಾಗವಹಿಸಿರುವರು. ಆದರೆ ಕಾವ್ಯಶಕ್ತಿ, ವಿಚಾರಶಕ್ತಿ, ಅನುಭಾವಗಳ ಮುಪ್ಪುರಿಯಲ್ಲಿ ಹೊಸೆದು ಬಂದ ವಚನ ಸಾಹಿತ್ಯದಲ್ಲಿ ಪದ್ಯದ ಲಯ ಗದ್ಯದ ಗತಿ ಎರಡೂ ಹಿತವಾಗಿ ಮಿತವಾಗಿ ಬೆರೆತು ಬೇರಿಲ್ಲದಂತಾಗಿ ವಿನೂತನವಾದ ಮೆರಗನ್ನು ನೀಡಿದೆ. ಪದ್ಯ ಸಾಹಿತ್ಯದಲ್ಲಿದ್ದ ಕೃತ್ರಿಮತೆ, ಚರಣಗಳ ಕಟ್ಟುನಿಟ್ಟು ಪ್ರಾಸಾನುಪ್ರಾಸಗಳ ಹಿಡಿತ ಇವನ್ನು ಮೀರಿನಿಂತಿತು ವಚನ ಸಾಹಿತ್ಯ. ಅಭಿವ್ಯಕ್ತಿ ಮೆರುಗು ಕಾವ್ಯದ ಮಹೋನ್ನತಿ, ಅನುಭವದ ಆಳ, ವಿಚಾರದ ಬೆಳಗು, ಸಾಮಾಜಿಕ ಕ್ರಾಂತಿ ಇವುಗಳಿಂದ ವಚನ ಸಾಹಿತ್ಯ ಭಾರತೀಯ ಸಾಹಿತ್ಯದಲ್ಲಿಯೇ ವಿಶಿಷ್ಟವಾಗಿದೆ.

ಈ ಕ್ರಾಂತಿಯ ನೇತಾರರೆಂದರೆ ಬಸವಣ್ಣ, ಚೆನ್ನಬಸವಣ್ಣ, ಪ್ರಭುದೇವ ಮುಂತಾದ ಶಿವಶರಣರು.

ವೈಷ್ಣವ ಭಕ್ತಿಸಂಪ್ರದಾಯದ ವಿಶಿಷ್ಟ ಕೊಡುಗೆ ಕನ್ನಡದ ದಾಸಸಾಹಿತ್ಯ. ಆಚಾರ್ಯತ್ರಯದಲ್ಲಿ ಕೊನೆಯವರಾದ ಮಧ್ವಾಚಾರ್ಯರು ದ್ವೈತ ಸಿದ್ಧಾಂತವನ್ನು ಪ್ರತಿಪಾದಿಸಿದ ಮೇಲೆ ಕರ್ನಾಟಕದಲ್ಲಿ ವೈಷ್ಣವ ಭಕ್ತಿ ಸಂಪ್ರದಾಯಕ್ಕೆ ಕಳೆ ಬಂದಿತು. ನರಹರಿತೀರ್ಥರು ಕ್ರಿ.ಶ.1275ರ ಹೊತ್ತಿಗಾಗಲೆ ಕನ್ನಡದಲ್ಲಿ ಕೆಲವು ಕೀರ್ತನೆಗಳನ್ನು ಬರೆದರು. ಆದರೂ ಅಲ್ಲಿಂದಲೇ ಈ ಕೀರ್ತನೆಗಳ ಪ್ರವಾಹ ಪ್ರಬಲವಾಗಿ ಪ್ರವಹಿಸಲಿಲ್ಲ. ಮತ್ತೆ ಮೂರು ಶತಮಾನ ತಡೆಯಬೇಕಾಯಿತು. ವಿಜಯನಗರ ಸಾಮ್ರಾಜ್ಯ ಉದಯವಾಗಿ ಉಚ್ಛ್ರಾಯದ ಮಟ್ಟವನ್ನು ಮುಟ್ಟಿತು. ಬಂಗಾಲದಲ್ಲಿ ಉದಯವಾದ ಚೈತನ್ಯ ವೈಷ್ಣವ ಭಕ್ತಿ ಸಂಪ್ರದಾಯ ಭಾರತದಲ್ಲಿ ಅನೇಕ ಕಡೆಗೆ ಮೈದೋರತೊಡಗಿತು. ಭಕ್ತಿಗೆ ಬೀಡಾದ ಕರ್ನಾಟಕದಿಂದ ಮಧ್ವ ಸಿದ್ಧಾಂತದ ಕಹಳೆ ಮೂರು ಶತಮಾನಗಳ ಹಿಂದೆ ಮೊಳಗಿತ್ತು. ವಿಜಯನಗರ ಸಾಮ್ರಾಜ್ಯದ ಉಚ್ಛ್ರಾಯ ಕಾಲದಲ್ಲಿ ಈ ಭಕ್ತಿಪಂಥಕ್ಕೆ ವಿಶಿಷ್ಟ ಶಕ್ತಿ, ಕಳೆ ಬಂದಿತು. ವ್ಯಾಕೂಟ ದಾಸಕೂಟಗಳು ಸ್ಥಾಪಿತವಾದವು. ಈ ದಾಸಕೂಟದ ಪ್ರಮುಖರೆಂದರೆ ಪುರಂದರದಾಸ, ಕನಕದಾಸರು. ಇವರಿಂದಲೆ ದಾಸ ಸಾಹಿತ್ಯ ಸ್ಫುರಣೆಗೊಂಡು ಪ್ರವಹಿಸತೊಡಗಿತು. ಈ ಕೀರ್ತನೆಗಳು ನವವಿಧ ಭಕ್ತಿಭಾವ ನಿರ್ಭರವಾಗಿವೆ. ಸಂಗೀತದ ಮಾಧುರ್ಯದಿಂದ ಮೆರಗು ಪಡೆದಿವೆ. ಅಚ್ಚಗನ್ನಡದಲ್ಲಿದ್ದು ಜನಸಾಮಾನ್ಯರ ಹೃದಯಕ್ಕೆ ನೇರವಾಗಿ ತಲುಪುತ್ತವೆ. ಸಂಸಾರವ್ಯಾಮೋಹ ನಿರಸನರಾಗಿ ಭಕ್ತಿಭಾವದಿಂದ ಊರೂರು, ಮನೆ ಮನೆ, ಬೀದಿ ಬೀದಿಗಳಲ್ಲಿ ಹಾಡುತ್ತಾ ದಾಸರು ಸಂಚರಿಸಿದರು. ಪ್ರಪಂಚದ ಅಸಾರತೆ, ನಶ್ವರತೆ, ಸಾಮಾಜಿಕ ಮೌಢ್ಯಗಳನ್ನು, ಮಾನವನ ಧಾಂಬಿಕ ವೃತ್ತಿಯನ್ನು ದಾಸರು ತಮ್ಮ ಕೀರ್ತನೆಗಳಲ್ಲಿ ಬಿತ್ತರಿಸಿದರು. ಹೀಗೆ ದಾಸ ಸಾಹಿತ್ಯ ಜನಪ್ರಿಯವಾಗಿ ಕನ್ನಡ ಸಾಹಿತ್ಯದ ಶಾಶ್ವತ ನಿಧಿಯೆನಿಸಿದೆ.

## 17.2 ಪಠ್ಯ-1 ವಚನಗಳು

ಇಲ್ಲಿ ಪ್ರಭುದೇವ ಹಾಗೂ ಬಸವಣ್ಣನವರ ವಚನಗಳನ್ನು ಆಯ್ದುಕೊಂಡಿದೆ. ಗುಹೇಶ್ವರ ಎಂಬುದು ಪ್ರಭುದೇವರ ವಚನಗಳ ಅಂಕಿತ. ಬಸವಣ್ಣನವರ ವಚನಗಳ ಅಂಕಿತ ಕೂಡಲಸಂಗಮದೇವ ಎಂಬುದು. ವಚನಗಳ ಮತ್ತು ಕೀರ್ತನೆಗಳ ಕೊನೆಯಲ್ಲಿ ಆಯಾ ವಚನ ಅಥವಾ ಕೀರ್ತನೆಗಳನ್ನು ರಚಿಸಿದ ವಚನಕಾರರ ಅಥವಾ ದಾಸರ ಇಷ್ಟ ದೈವದ ಹೆಸರು ಬರುತ್ತದೆ. ಇದನ್ನು ಅಂಕಿತವೆನ್ನುತ್ತಾರೆ.

### 17.2.1 ಪ್ರಭುದೇವರ ವಚನಗಳು

1) ಕೃತಯುಗದಲ್ಲಿ ಶ್ರೀಗುರು ಶಿಷ್ಯಂಗೆ ಬಡಿದು ಬುದ್ಧಿಯ ಕಲಿಸಿದಡೆ ಆಗಲಿ ಮಹಾಪ್ರಸಾದವೆಂದೆನಯ್ಯ
ತ್ರೇತಾಯುಗದಲ್ಲಿ ಶ್ರೀಗುರು ಶಿಷ್ಯಂಗೆ ಬೈದು ಬುದ್ಧಿಯ ಕಲಿಸಿದಡೆ ಆಗಲಿ ಮಹಾಪ್ರಸಾದವೆಂದೆನಯ್ಯ
ದ್ವಾಪರದಲ್ಲಿ ಶ್ರೀಗುರು ಶಿಷ್ಯಂಗೆ ಜಂಕಿಸಿ ಬುದ್ಧಿಯ ಕಲಿಸಿದಡೆ ಆಗಲಿ ಮಹಾಪ್ರಸಾದವೆಂದೆನಯ್ಯ
ಕಲಿಯುಗದಲ್ಲಿ ಶ್ರೀಗುರು ಶಿಷ್ಯಂಗೆ ವಂದಿಸಿ ಬುದ್ಧಿಯ ಕಲಿಸಿದಡೆ ಆಗಲಿ ಮಹಾಪ್ರಸಾದವೆಂದೆನಯ್ಯ
ಗುಹೇಶ್ವರಾ, ನಿಮ್ಮ ಕಾಲದ ಕಟ್ಟಳೆಯ ಕಲಿತನಕ್ಕೆ ನಾನು ಬೆರಗಾದೆನು.

ಕಾಲಗತಿಸಿದಂತೆ ಗುರು ಶಿಷ್ಯ ಸಂಬಂಧ ಹೇಗೆ ಮಾರ್ಪಡುತ್ತಾ ಬಂದಿದೆಯೆಂದು ಈ ವಚನ ಮಾರ್ಮಿಕವಾಗಿ ನಿರೂಪಿಸುತ್ತದೆ. ಕೃತಯುಗದಲ್ಲಿ, ಗುರು ಶಿಷ್ಯನಿಗೆ ಬಡಿದು ಬುದ್ಧಿಯನ್ನು ಕಲಿಸುತ್ತಿದ್ದ. ಆಗ ಅದು ಮಹಾ

ಪ್ರಸಾದವೆನಿಸಿದ್ದಿತು. ಮುಂದೆ ತ್ರೇತಾಯುಗದಲ್ಲಿ ಕಾಲ ಬದಲಾಯಿಸಿತು. ಹಿಂದೆ ಬಡಿದು ಬುದ್ಧಿಯನ್ನು ಕಲಿಸುತ್ತಿದ್ದ ಗುರು ಈಗ ಬೈದು ಬುದ್ಧಿ ಹೇಳತೊಡಗಿದ. ದ್ವಾಪರ ಯುಗದಲ್ಲಿ ಜಂಕಿಸಿ ಬುದ್ಧಿ ಕಲಿಸಬೇಕಾಗಿದೆ. ಎಂತಹ ನಿತ್ಯ ಸತ್ಯವನ್ನು ಈ ವಚನ ಬಿತ್ತರಿಸುತ್ತದೆಯೆಂಬುದನ್ನು ನೀವು ತಿಳಿದುಕೊಳ್ಳಬೇಕು. ಈ ಯುಗದಲ್ಲಿ ಗುರು ಕೈಕೊಂಡ ವಿಧಾನಗಳು ಕಾಲ ಸಮ್ಮತವಾಗಿ ಮಹಾಪ್ರಸಾದವೆನಿಸಿದ್ದವು. ಗುಹೇಶ್ವರಲಿಂಗದ ಕಾಲದ ಕಟ್ಟಳೆಯ ಕಲಿತನಕ್ಕೆ ಪ್ರಭು ಬೆರಗಾಗಿದ್ದಾರೆ.

ಜಂಕಿಸು = ಗದರಿಸು, ಗಜರಿಸು, ಬಾಯಿ ಮಾತಿನಿಂದ ಒತ್ತಾಯಿಸು. ಮಹಾಪ್ರಸಾದವೆಂದೆನಯ್ಯ — ಹೀಗೆ ವಾಕ್ಯ ಮುಗಿಯುವುದು ದೇವನನ್ನು ಸಂಬೋಧಿಸಿ ಹೇಳುವುದು ವಚನಗಳ ವೈಶಿಷ್ಟ್ಯ

ಕೃತ, ತ್ರೇತಾ, ದ್ವಾಪರ, ಕಲಿ — ಇವು ನಾಲ್ಕು ಭಾರತೀಯ ಸಂಪ್ರದಾಯದ ಯುಗಗಳು. ಕೃತ ಯುಗದಲ್ಲಿ ಸತ್ಯ ಧರ್ಮ ಸ್ಥಿರವಾಗಿದ್ದಿತೆಂದೂ ಮುಂದೆ ಕ್ರಮೇಣ ಯುಗ ಯುಗಕ್ಕೆ ಅದು ಕಡಿಮೆಯಾಗುತ್ತಾ ಬಂದಿತೆಂದೂ ನಮ್ಮ ಶಾಸ್ತ್ರ ಪುರಾಣಗಳು ಹೇಳುತ್ತವೆ. ಪ್ರತಿಯೊಂದು ಯುಗಕ್ಕೂ ಕಾಲ ಪರಿಮಿತಿಯಿದೆ.

2) ಕಲ್ಯಾಣವೆಂಬ ಪ್ರಣತೆಯಲ್ಲಿ ಭಕ್ತಿರಸವೆಂಬ ತೈಲವನೆರೆದು ಆಚಾರವೆಂಬ ಬತ್ತಿಯಲ್ಲಿ ಬಸವಣ್ಣನೆಂಬ ಜ್ಯೋತಿಯ ಮುಟ್ಟಿಸಲು ತೊಳಗಿ ಬೆಳಗುತ್ತಿದ್ದಿತ್ತಯ್ಯಾ ಶಿವನ ಪ್ರಕಾಶ! ಆ ಬೆಳಗಿನೊಳಗೆ ಒಪ್ಪುತ್ತಿದ್ದರಯ್ಯಾ ಅಸಂಖ್ಯಾತ ಭಕ್ತಗಣಾದಿಗಳು ಶಿವಭಕ್ತರಿರ್ದ ಕ್ಷೇತ್ರವೆ ಅವಿಮುಕ್ತ ಕ್ಷೇತ್ರವೆಂಬುದು ಹುಸಿಯೆ? ಶಿವಭಕ್ತರಿರ್ದ ದೇಶ ಪಾವನ ವೆಂಬುದು ಹುಸಿಯೆ? ಗುಹೇಶ್ವರ ಲಿಂಗದಲ್ಲಿ ಎನ್ನ ಪರಮಾರಾಧ್ಯ ಸಂಗನ ಬಸವಣ್ಣನ ಮಹಿಮೆಯ ನೋಡಾ ಸಿದ್ಧರಾಮಯ್ಯ!

ಬಸವಣ್ಣನವರ ವ್ಯಕ್ತಿತ್ವ ಪ್ರಭುದೇವರ ಈ ವಚನದಲ್ಲಿ ಸುಂದರವಾಗಿ ಮೂಡಿ ಬಂದಿದೆ. ಕಲ್ಯಾಣದ ಶಿವಶರಣರ ಕ್ರಾಂತಿಯ ವಿಷಯವನ್ನು ಪ್ರಾರಂಭದಲ್ಲಿ ಹೇಳಲಾಗಿದೆ. ಆ ಕ್ರಾಂತಿಯ ಕೇಂದ್ರ ಬಿಂದು ಬಸವಣ್ಣನವರು. ಅಧಿಷ್ಠಾನ ಕಲ್ಯಾಣ. ಬಸವಣ್ಣನ ಭಕ್ತಿಯು ದೇಶದ ನಾನಾ ಭಾಗಗಳಿಂದ ಶರಣರನ್ನು ಆಕರ್ಷಿಸಿತು. ಎಲ್ಲರ ಭಕ್ತಿ ಕಲ್ಯಾಣದಲ್ಲಿ ಕೇಂದ್ರೀಕೃತವಾಯಿತು. ಆಚಾರವೆ ಶರಣರ ಪರಮ ಸಾಧನವೆನಿಸಿತು. ಇಲ್ಲಿಯ ರೂಪಕ ಬಹಳ ಸುಂದರ, ಅರ್ಥಪೂರ್ಣ ಆಗಿದೆ. ಕಲ್ಯಾಣವೆಂಬುದು ಪ್ರಣತೆಯಾಗಿದೆ, ಭಕ್ತಿ ರಸವೆ ತೈಲವಾಗಿದೆ. ಆಚಾರವೆ ಬತ್ತಿಯಾಗಿ ಬಸವಣ್ಣನೆಂಬ ಜ್ಯೋತಿಯನ್ನು ಆ ಬತ್ತಿಗೆ ಮುಟ್ಟಿಸಿದರು. ಆ ಕ್ಷಣದಲ್ಲಿ ಶಿವ ಪ್ರಕಾಶ ತೊಳಗಿ ಬೆಳಗಿತು. ಆ ಬೆಳಗಿನಲ್ಲಿ ಅಸಂಖ್ಯಾತ ಭಕ್ತಗಣಗಳು ಒಪ್ಪುತ್ತಿದ್ದರು. ಶಿವ ಭಕ್ತರಿದ್ದ ಕ್ಷೇತ್ರವೆ ಅವಿಮುಕ್ತ ಕ್ಷೇತ್ರವಾಗಿದೆ. ಅವರಿದ್ದ ದೇಶಪಾವನ. ಇದು ಸಂಗನ ಬಸವಣ್ಣನ ಮಹಿಮೆ, ಎಂದು ಸಿದ್ಧರಾಮನಿಗೆ ಪ್ರಭುದೇವರು ಹೇಳುವರು.

## 17.2.2 ಬಸವೇಶ್ವರ ವಚನಗಳು

1) ದಯವಿಲ್ಲದ ಧರ್ಮವದಾವುದಯ್ಯಾ
ದಯವೇ ಬೇಕು ಸಕಲ ಪ್ರಾಣಿಗಳೆಲ್ಲರಲ್ಲಿಯು
ದಯವೇ ಧರ್ಮದ ಮೂಲವಯ್ಯಾ
ಕೂಡಲ ಸಂಗಯ್ಯನಂತಲ್ಲದೊಲ್ಲನಯ್ಯಾ

ಎಲ್ಲ ಧರ್ಮಗಳಿಗೆ ಮೂಲತತ್ವ ದಯೆ. ದಯವಿಲ್ಲದಿದ್ದರೆ ಅದು ಧರ್ಮವೇ ಅಲ್ಲ. ದಯವಿಲ್ಲದ ಧರ್ಮ ಯಾವುದು? ಸಕಲ ಪ್ರಾಣಿಗಳಲ್ಲಿ ದಯವಿರಬೇಕು. ದಯವಿಲ್ಲದಿದ್ದರೆ ದೇವನೊಲ್ಲನು.

2) ಮೇಲಾಗಲೊಲ್ಲೆನು ಕೀಳಾಗಲಲ್ಲದೆ
ಕೀಳಿಂಗಲ್ಲದೆ ಹಯನ ಕರೆವುದೆ?
ಮೇಲಾಗಿ ನರಕದೊಳೋಲಾಡಲಾರೆನು
ನಿಮ್ಮ ಶರಣರ ಪಾದಕ್ಕೆ ಕೀಳಾಗಿರಿಸು
ಮಹಾದನಿ ಕೂಡಲಸಂಗಮದೇವಾ

ಎನಗಿಂತ ಕಿರಿಯರಿಲ್ಲ; ಶಿವಭಕ್ತರಿಗಿಂತ ಹಿರಿಯರಿಲ್ಲ ಎಂಬುದು ಬಸವಣ್ಣನವರ ದಿವ್ಯ ಜೀವನದ ಸೂತ್ರ. ಈ ಅಭಿಪ್ರಾಯವನ್ನು ಅವರು ತಮ್ಮ ಅನೇಕ ವಚನಗಳಲ್ಲಿ ವ್ಯಕ್ತ ಪಡಿಸಿರುವರು. ಮೇಲಾಗಲೊಲ್ಲೆನು. ಕೀಳಾಗಲು ಅಂದರೆ ಕೆಳಗೆ ಉಳಿಯಲು ಇಚ್ಛಿಸುವೆನು. ಹಸು ಹಿಂಡಬೇಕಾದರೆ ಕೆಳಗೆ ಕುಳಿತರೆ ಮಾತ್ರ ಹಿಂಡಬಹುದಲ್ಲವೆ? ಮೇಲಾಗುವುದೆಂದರೆ ನರಕದೊಳಗೆ ಓಲಾಡಿದಂತೆ. ಶರಣರ ಪಾದದ ಕೆಳಗಿರಿಸಿ ಅವರ ಸೇವೆಯಲ್ಲಿ ನನ್ನನ್ನು ತೊಡಗಿಸು ಮಹಾದಾನಿ ಕೂಡಲ ಸಂಗಮದೇವ ಎಂದು ಪ್ರಾರ್ಥಿಸಿರುವರು. ಕೀಳು = ಕೆಳಗು, ಕರೆ = ಹಿಂಡು.

3) ದೇವಲೋಕ ಮರ್ತ್ಯ ಲೋಕವೆಂಬುದು
ಬೇರಿಲ್ಲ ಕಾಣಿಭೋ
ಸತ್ಯವ ನುಡಿವುದೇ ದೇವಲೋಕ! ಮಿಥ್ಯವ ನುಡಿವುದೇ ಮರ್ತ್ಯ ಲೋಕ
ಆಚಾರವೇ ಸ್ವರ್ಗ; ಅನಾಚಾರವೇ ನರಕ
ಕೂಡಲ ಸಂಗಮದೇವಾ ನೀವೇ ಪ್ರಮಾಣ.

ದೇವಲೋಕ, ಮರ್ತ್ಯಲೋಕವೆಂಬವು ಪುರಾಣಗಳು ಹೇಳುವಂತೆ ಬೇರೆ ಇಲ್ಲವೇ ಇಲ್ಲ. ಎಲ್ಲ ಈ ಲೋಕದಲ್ಲಿಯೆ. ಸತ್ಯವನ್ನು ನುಡಿಯುವುದು ; ನುಡಿದಂತೆ ನಡೆಯುವುದು ಇದೇ ದೇವ ಲೋಕ. ಮಿಥ್ಯೆ (ಹುಸಿ, ಸುಳ್ಳು) ಯನ್ನು ನುಡಿಯುವುದೇ ಮರ್ತ್ಯಲೋಕ. ಆಚಾರವೇ ಸ್ವರ್ಗ, ಅನಾಚಾರವೇ ನರಕ. ಇದಕ್ಕೆ ಕೂಡಲ ಸಂಗಮದೇವನೇ ಪ್ರಮಾಣ ಎಂದು ಬಸವಣ್ಣನವರು ಸಾರಿರುವರು. ಈ ವೈಚಾರಿಕ ಹಿನ್ನೆಲೆಯಲ್ಲಿ ಮಾನವ ಜಗತ್ತಿನ ಅಗ್ಗಳಿಕೆ ಇಲ್ಲಿ ವ್ಯಕ್ತವಾಗಿದೆ.

ಕಾಣಿ ಭೋ = ಕಾಣಿರೋ

ಕನ್ನಡದಲ್ಲಿ ಕ್ರಿಯಾಪದಗಳಿಲ್ಲದೆ ವಾಕ್ಯರಚನೆ ಮಾಡಬಹುದೆಂಬುದಕ್ಕೆ ಈ ವಚನ ಉತ್ತಮ ನಿದರ್ಶನ. ಸತ್ಯವ ನುಡಿವುದೇ ದೇವಲೋಕ. ಮಿಥ್ಯವ ನುಡಿವುದೇ ಮರ್ತ್ಯಲೋಕ. ಆಚಾರವೇ ಸ್ವರ್ಗ. ಅನಾಚಾರವೇ ನರಕ. ಇವು ಪೂರ್ಣವಾಕ್ಯಗಳು. ಇಲ್ಲಿ ಕ್ರಿಯಾಪದ ಉಕ್ತವಾಗಿರುವುದಿಲ್ಲ.

4) ಹಾವು ತಿಂದವರ ನುಡಿಸಬಹುದು :
ಗರಹೊಡೆದವರ ನುಡಿಸಬಹುದು :
ಸಿರಿಗರ ಹೊಡೆದವರ ನುಡಿಸಲು ಬಾರದು ನೋಡಯ್ಯಾ!
ಬಡತನವೆಂಬ ಮಂತ್ರವಾದಿ ಹೊಗಲೊಡನೆ
ನುಡಿವರಯ್ಯಾ ಕೂಡಲು ಸಂಗಮ ದೇವಾ!

ಬಡತನ ಶ್ರೀಮಂತಿಕೆಗಳ ಬಗೆಗೆ ಬಸವಣ್ಣನವರ ಅಭಿಪ್ರಾಯಗಳನ್ನು ಇಲ್ಲಿ ಕಾಣಬಹುದು. ಹಾವು ತಿಂದವರು = ಹಾವು ಕಚ್ಚಿದವರು. ಗರ = ಗ್ರಹ, ಭೂತ, ಗರ ಹೊಡೆದವರು = ಭೂತ ಬಡಿದವರು.

ಹಾವು ಕಚ್ಚಿದ ಮನುಷ್ಯ ನಿದ್ರೆ ಹೋಗುತ್ತಾನೆ. ಸಾಮಾನ್ಯವಾಗಿ ಹಾವಿನ ವಿಷದ ಪ್ರಭಾವದಿಂದ ಅವನು ಮಾತನಾಡಲಾರ. ಅಂಥವನನ್ನೂ ಮಾತನಾಡಿಸಬಹುದು. ದೆವ್ವ ಬಡಿದವನನ್ನೂ ಸಹ ಏನಾದರೂ ಮಾಡಿ ಮಾತನಾಡಿಸಬಹುದು. ಅಸಂಭವವಾದ ಇವೆರಡು ಕ್ರಿಯೆಗಳನ್ನೂ ಮಾಡಬಹುದು. ಆದರೆ ಸಿರಿಗರ ಅಂದರೆ ಶ್ರೀಮಂತಿಕೆಯ ಪಿಶಾಚಿ ಬಡಿದವರನ್ನು ಮಾತನಾಡಿಸುವುದು ಅಸಾಧ್ಯ. ಅವರು ಬಾಯಿ ತೆಗೆಯುವುದು ಬಡತನವೆಂಬ ಮಂತ್ರವಾದಿ ಬಂದರೆ ಮಾತ್ರ. ಭೂತಬಡಿದವರು ಮಂತ್ರವಾದಿ ಸನಿಹಕ್ಕೆ ಬಂದೊಡನೆ ಮಾತನಾಡುವರು. ಹೀಗೆ ಬಡತನ ಬಂದರೆ ಮಾತ್ರ ಇವರು ಮಾತನಾಡುತ್ತಾರೆ. ಮಂತ್ರವಾದಿ = ಮಂತ್ರಗಾರ.

5) ಹಾವಿನ ಹೆಡೆಯ ಕೊಂಡು ಕೆನ್ನೆಯ ತುರಿಸುವಂತೆ
ಉರಿವ ಕೊಳ್ಳಿಯ ಕೊಂಡು ಮಂಡೆಯ ಸಿಕ್ಕು ಬಿಡಿಸುವಂತೆ
ಹುಲಿಯ ಮೀಸೆಯ ಹಿಡಿದುಕೊಂಡು ಒಲಿದುಯ್ಯಲೆಯಾಡುವಂತೆ
ಕೂಡಲ ಸಂಗನ ಶರಣರೊಡನೆ
ಮರೆದು ಸರಸವಾಡಿದರೆ
ಸುಣ್ಣದ ಕಲ್ಲ ಮಡಿಲಲ್ಲಿ ಕಟ್ಟಿಕೊಂಡು ಮಡುವ ಬಿದ್ದಂತೆ.

ಶರಣರು ಸಾಮಾನ್ಯರ ಮಧ್ಯದಲ್ಲಿದ್ದರೂ ಅವರು ವಿಪರೀತ ಚರಿತರು. ಅವರನ್ನು ಲಘುವಾಗಿ ಕಾಣುವುದು, ಅವರೊಡನೆ ಲಘುವಾಗಿ ಮಾತನಾಡುವುದು ಸಲ್ಲದು. ಹಾಗೆ ಮಾಡಿದರೆ ಹಾವಿನ ಹೆಡೆಯನ್ನು ತೆಗೆದುಕೊಂಡು ತಲೆ ಗೂದಲನ್ನು ತುರಿಸಿಕೊಂಡಂತೆ. ಉರಿವ ಕೊಳ್ಳಿಯನ್ನು ತೆಗೆದುಕೊಂಡು ತಲೆಗೂದಲಿನ ತೊಡಕನ್ನು ಬಿಡಿಸಿ ಕೊಂಡಂತೆ. ಹುಲಿಯ ಮೀಸೆಯನ್ನು ಹಿಡಿದು ಜೋಕಾಲಿಯಾಡಿದಂತೆ. ಸುಣ್ಣದಕಲ್ಲನ್ನು ಮಡಿಲಲ್ಲಿ ಕಟ್ಟಿಕೊಂಡು ನೀರಿಗಿಳಿದಂತೆ. ಹಾವಿನ ಹೆಡೆಯಿಂದ ಕೆನ್ನೆಯನ್ನು ತುರಿಸಿಕೊಂಡರೆ, ಉರಿಯುವ ಕೊಳ್ಳಿಯಿಂದ ತಲೆಗೂದಲಿನ ತೊಡಕನ್ನು ಬಿಡಿಸಿಕೊಂಡರೆ, ಹುಲಿಯ ಮೀಸೆಯನ್ನು ಹಿಡಿದು ಜೋಕಾಲಿಯಾಡಿದರೆ, ಸುಣ್ಣದ ಕಲ್ಲನ್ನು ಕಟ್ಟಿಕೊಂಡು ನೀರಿಗಿಳಿದರೆ ಏನಾಗುವುದೆಂಬುದು ಎಲ್ಲರ ಅರಿತಕ್ಕೆ ಬಂದ ವಿಷಯ. ಶರಣರೊಡನೆ ಸರಸವಾಡಿದವರ ಸ್ಥಿತಿ ಹೀಗಾಗುವುದೆಂದು ಬಸವಣ್ಣನವರು ಎಚ್ಚರಿಸಿದ್ದಾರೆ. ನಿತ್ಯದ ಜೀವನದಲ್ಲಿ ಕೇಳಿಬರುವ ಹೋಲಿಕೆಗಳ ಮಾಲೆಯನ್ನೇ ತಂದು ವಿಷಯವನ್ನು ಬೋಧಿಸುವ ವಚನಗಳ ಭಾಷೆ ಎಷ್ಟು ಪರಿಣಾಮಕಾರಿಯಾಗಿದೆ ನೋಡಿ. ಮಂಡೆ = ತಲೆ, ಸಿಕ್ಕು = ಕೂದಲಿನ ತೊಡಕು, ಉಯ್ಯಲೆ = ಜೋಕಾಲಿ, ಸರಸವಾಡು = ಲಘುವಾಗಿ, ಹಗುರಾಗಿ ಮಾತನಾಡು, ಮಡಿಲು = ಉಡಿ, ಮಡು = ನೀರಿನ ಮಡು

6) ಕಾಸಿ ಕಮ್ಮಾರನಾದ, ಬೀಸಿ ಮಡಿವಾಳನಾದ
ಹಾಸನಿಕ್ಕೆ ಸಾಲಿಗನಾದ; ವೇದವನೋದಿ ಹಾರುವನಾದ
ಕರ್ಣದಲ್ಲಿ ಜನಿಸಿದವರುಂಟೆ ಜಗದೊಳಗೆ?
ಇದು ಕಾರಣ ಕೂಡಲ ಸಂಗಮದೇವಾ
ಲಿಂಗಸ್ಥಲವನರಿದವನೆ ಕುಲಜನು

ಕಾಸಿ ಕಬ್ಬಿಣದ ಸಾಮಾನು ಮಾಡಿ ಕಮ್ಮಾರನೆನಿಸಿದ, ಬಟ್ಟೆಗಳನ್ನು ಬೀಸಿ ಒಗೆದು ಮಡಿವಾಳನಾದ, ಹಾಸು ಹಾಕಿ ಪಟ್ಟೆ ಸಾಲಿಗನಾದ, ವೇದವನೋದಿ ಹಾರುವನಾದ. ಎಲ್ಲ ವ್ಯಕ್ತಿಗಳೂ ಒಂದೆ. ಎಲ್ಲರೂ ಸರಿಸಮಾನರು. ಕಿವಿಯಲ್ಲಿ ಹುಟ್ಟಿದವರು ಯಾರಾದರೂ ಉಂಟೆ ಜಗತ್ತಿನಲ್ಲಿ. ಪರಮಾತ್ಮನನ್ನು ಅರಿತವನೊಬ್ಬನೇ ಕುಲಜನು.

7) ಕೊಲುವವನೆ ಮಾದಿಗ, ಹೊಲಸು ತಿಂಬುವನೆ ಹೊಲೆಯ
ಕುಲವೇನೋ ಅವಂದಿರ ಕುಲವೇನೋ?
ಸಕಲ ಜೀವಾತ್ಮರಿಗೆ ಲೇಸನೆ ಬಯಸುವ
ನಮ್ಮ ಕೂಡಲ ಸಂಗನ ಶರಣರೆ ಕುಲಜರು

ಕುಲಜ, ಕುಲಹೀನ ಯಾರು ಎಂಬುದನ್ನು ಸಾರಿದ್ದಾರೆ ಈ ವಚನದಲ್ಲಿ ಬಸವಣ್ಣನವರು.

# ಅಭ್ಯಾಸ - 1

(1) ಕೃತಯುಗದಿಂದ ಕಲಿಯುಗದವರೆಗೆ ಗುರು ಶಿಷ್ಯ ಸಂಬಂಧದಲ್ಲಿ ಕಂಡುಬರುವ ವ್ಯತ್ಯಾಸಗಳಾವುವು?

..........................................................................................

..........................................................................................

..........................................................................................

..........................................................................................

(2) ಪ್ರಭುದೇವರು ಬಸವಣ್ಣನವರನ್ನು ಹೇಗೆ ಕಂಡಿರುವರು?

..........................................................................................

..........................................................................................

..........................................................................................

..........................................................................................

(3) ಬಸವಣ್ಣನವರ ದೃಷ್ಟಿಯಲ್ಲಿ ಧರ್ಮದ ಮೂಲ ಯಾವುದು?

..........................................................................................

..........................................................................................

..........................................................................................

..........................................................................................

(4) ಬಸವಣ್ಣನವರು ತಮ್ಮ ಕಿಂಕರ ಭಾವವನ್ನು ಹೇಗೆ ವ್ಯಕ್ತಪಡಿಸುವರು?

..........................................................................................

..........................................................................................

..........................................................................................

..........................................................................................

(5) ಬಸವಣ್ಣನವರ ಕಲ್ಪನೆಯಲ್ಲಿ ಸ್ವರ್ಗ - ನರಕ, ದೇವಲೋಕ - ಮರ್ತ್ಯಲೋಕಗಳೆಂದರೆ ಯಾವುವು?

..........................................................................................

..........................................................................................

..........................................................................................

..........................................................................................

(6) ಬಡತನ, ಶ್ರೀಮಂತಿಕೆಯನ್ನು ಬಸವಣ್ಣನವರು ಹೇಗೆ ಚಿತ್ರಿಸಿರುವರು?

..........................................................................................

..........................................................................................

..........................................................................................

..........................................................................................

(7) ಬಸವಣ್ಣನವರ ಅಭಿಮತದಂತೆ ಕುಲಜರೆಂದರೆ ಯಾರು?

..........................................................................................

..........................................................................................

## 17.3 ಪಠ್ಯ - 2 ಪುರಂದರದಾಸರ ಕೀರ್ತನೆಗಳು

'ದಾಸರೆಂದರೆ ಪುರಂದರ ದಾಸರಯ್ಯ' ಎಂಬ ನುಡಿಯುಂಟು. ಭಕ್ತಿಯ ಉತ್ಕಟತೆ, ಕಾವ್ಯದ ಪ್ರಖರತೆ, ಸಂಗೀತದ ರಮ್ಯತೆ ಇವುಗಳಿಂದ ಪುರಂದರದಾಸರ ಹಾಡುಗಳು ವಿಶಿಷ್ಟ ಸ್ಥಾನ ಪಡೆದಿವೆ. ಇಲ್ಲಿ ಅವರ ಕೆಲವು ಕೀರ್ತನೆಗಳನ್ನು ಆಯ್ದುಕೊಳ್ಳಲಾಗಿದೆ. ಪುರಂದರದಾಸರು ವಿಜಯನಗರದ ಕೃಷ್ಣದೇವರಾಯನ ಕಾಲದಲ್ಲಿದ್ದರು.

1). ಧರ್ಮವೇ ಜಯವೆಂಬ ದಿವ್ಯ ಮಂತ್ರ
ಮರ್ಮವನರಿತು ಮಾಡಲೇ ಬೇಕು

ವಿಷವಿಕ್ಕಿದವನಿಗೆ ಷಡ್ರಸವನುಣಿಸಲೇಬೇಕು
ದ್ವೇಷ ಮಾಡಿದವನ ಪೋಷಿಸಲೇಬೇಕು
ಪುಸಿ ಮಾಡಿ ಕೆಡಿಸುವನ ಹಾಡಿ ಹರಸಲೆಬೇಕು
ಮೋಸ ಮಾಡುವನ ಹೆಸರು ಮಗನಿಗಿಡಬೇಕು ॥ ೧ ॥

ಹಿಂದೆ ನಿಂದಿಪರನ್ನು ವಂದಿಸುತಲಿರಬೇಕು
ಬಂಧನದೊಳಿಟ್ಟವರ ಬೆರೆಯಬೇಕು
ಕೊಂದ ವೈರಿಯ ಮನೆಗೆ ನಡೆದು ಹೋಗಬೇಕು
ಕುಂದನೆಣಿಸುವರ ಗೆಳೆತನ ಮಾಡಬೇಕು ॥ ೨ ॥

ಕೊಂಡೊಯ್ದು ಬಡಿಯುವರ ಕೊಂಡಾಡುತಿರಬೇಕು
ಕಂಡು ಸಹಿಸದವರ ಕರೆಯಬೇಕು
ಪುಂಡರೀಕಾಕ್ಷ ಶ್ರೀಪುರಂದರ ವಿಠ್ಠಲನ
ಕೊಂಡಾಡಿ ತಾ ಧನ್ಯನಾಗಬೇಕು ॥ ೩ ॥

**ಭಾವಾರ್ಥ**

'ಧರ್ಮವೇ ಜಯವೆಂಬ' ದಿವ್ಯಮಂತ್ರದ ಮರ್ಮವನ್ನು ಈ ಕೀರ್ತನೆಯಲ್ಲಿ ಪುರಂದರದಾಸರು ಸ್ವಾರಸ್ಯ ಪೂರ್ವಕವಾಗಿ ಹೇಳಿದ್ದಾರೆ. ವಿಷವಿಕ್ಕಿದವನಿಗೆ ಷಡ್ರಸವುಣಿಸಬೇಕು. ದ್ವೇಷ ಮಾಡಿದವರನ್ನು ಪೋಷಿಸ ಬೇಕು. ಹುಸಿ ಮಾಡಿ ಕೆಡಿಸುವವರನ್ನು ಹಾಡಿ ಹರಸಬೇಕು. ಮೋಸ ಮಾಡುವವನ ಹೆಸರನ್ನು ಮಗನಿಗಿಡಬೇಕು. ಹಿಂದೆ ನಿಂದಿಸುವವರನ್ನು ವಂದಿಸಬೇಕು. ಬಂಧನದೊಳಿಟ್ಟವರ ಕೂಡೆ ನಾವು ಬೆರೆಯಬೇಕು. ಕೊಂದ ವೈರಿಯ ಮನೆಗೆ ನಡೆದು ಹೋಗಬೇಕು. ಕುಂದನೆಣಿಸುವವರ ಗೆಳೆತನ ಮಾಡಬೇಕು. ನಮ್ಮನ್ನು ಕೊಂಡೊಯ್ದು ಬಡಿಯು ವವರನ್ನು ನಾವು ಸದಾ ಕೊಂಡಾಡುತ್ತಿರಬೇಕು. ಹೀಗೆ ನಮಗೆ ಅನ್ಯಾಯ ಮಾಡಿದವರಿಗೆ ನಾವು ಅನ್ಯಾಯ ಮಾಡ ಬಾರದು. ಪ್ರತಿಯಾಗಿ ನಾವು ಅವರಿಗೆ ಕಲ್ಯಾಣವನ್ನುಂಟು ಮಾಡಬೇಕು ಎಂದು ಉದಾತ್ತ ವಿಚಾರಗಳನ್ನು ಪುರಂದರದಾಸರು ಇಲ್ಲಿ ಹೇಳಿರುವರು.

**ಕಠಿಣ ಪದಗಳ ಅರ್ಥ**

ಮರ್ಮ = ರಹಸ್ಯ, ಇಕ್ಕು = ಇಡು, ನೀಡು. ಷಡ್ರಸ = ಆರು ರಸಗಳು - ಮಧುರ, ಲವಣ, ತಿಕ್ತ (ಕಹಿ), ಕಟು (ಖಾರ), ಕಷಾಯ, ಆಮ್ಲ (ಹುಳಿ). ಹುಸಿ = ಸುಳ್ಳು, ಹಾಡಿಹರಸು = ಸ್ತೋತ್ರ ಮಾಡು, ಕುಂದು = ದೋಷ, ಪೋಷಿಸಲಿಬೇಕು, ಉಣಿಸಲೆಬೇಕು, ಹರಸಲೆಬೇಕು ಮೊದಲಾದವು ಹೊಸಗನ್ನಡದಲ್ಲಿ ಪೋಷಿಸಬೇಕು, ಉಣಿಸಬೇಕು, ಹರಸಬೇಕು ಎಂದಾಗುತ್ತವೆ.

ದ್ವಿತೀಯಾ ವಿಭಕ್ತಿ ಪ್ರತ್ಯಯ 'ಅನ್ನು' / 'ಅ' ಎರಡೂ ಪ್ರಯೋಗವಾಗಿರುವುದನ್ನು ಇಲ್ಲಿ ಗಮನಿಸಬಹುದು. ಉದಾಹರಣೆಗೆ: ಹಿಂದೆ ನಿಂದಿಪರನ್ನು, ದ್ವೇಷ ಮಾಡಿದವನ (= ಮಾಡಿದವನನ್ನು) ಇಟ್ಟವರ (= ಇಟ್ಟವರನ್ನು), ಇತ್ಯಾದಿ.

2) ಆರು ಹಿತವರು ನಿನಗೆ
ಮೂರು ಮಂದಿಯೊಳಗೆ
ನಾರಿಯೋ, ಧಾರುಣಿಯೋ
ಬಲುಧನದ ಸಿರಿಯೋ

ಅನ್ಯರಲಿ ಜನಿಸಿರ್ದ ಅಂಗನೆಯ ಕರೆತಂದು
ತನ್ನ ಮನೆಗವಳ ಯಜಮಾನಿ ಎನಿಸಿ
ಭಿನ್ನವಿಲ್ಲದೆ ಅರ್ಧದೇಹವೆನಿಸುವ ಸತಿಯು
ಕಣ್ಣಿನಲಿ ನೋಡಲಮ್ಮಳು ಕಾಲವಶದಿ ॥ ೧ ॥

ಮುನ್ನ ಶತಕೋಟಿ ರಾಯರುಗಳಾಳಿದ ನೆಲನ
ತನ್ನದೆಂದೆನುತ ಶಾಸನವ ಬರೆಸಿ
ಬಿನ್ನಣದ ಮನೆ ಕಟ್ಟಿ ಕೋಟೆಕೊತ್ತಳವಿಕ್ಕಿ
ಚೆನ್ನಿಗನು ಅಸುವಳಿಯೆ ಹೊರಗೆ ಹಾಕುವರು ॥ ೨ ॥

ಉದ್ಯೋಗ ವ್ಯವಹಾರ ನೃಪಸೇವೆ ಕುಶಲಗತಿ
ಕ್ಷುದ್ರತನ ಕಳವು ಪರದ್ರೋಹದಿಂದ
ಬುದ್ಧಿಯಿಂದಲೇ ಗಳಿಸಿ ಇಟ್ಟಿದ್ದ ಅರ್ಥವನ್ನು
ಸದ್ಯದಲಿ ಆರುಂಬರು ಪೇಳೋ ಮನುಜ ॥ ೩ ॥

ಶೋಕವನ್ನುಗೈವರು ಸತಿಸುತರು ಬಾಂಧವರು
ಜೋಕೆ ತಪ್ಪಿದ ಬಳಿಕ ಅರ್ಥವ್ಯರ್ಥ
ಲೋಕದೊಳು ಗಳಿಸಿರ್ದ ಪುಣ್ಯಪಾಪಗಳೆರಡು
ಸಾಕಾರವಾಗಿ ಸಂಗಡ ಬಾಹೊವಲ್ಲದೆ ॥ ೪ ॥

**ಭಾವಾರ್ಥ**

ಹೆಣ್ಣು (ನಾರಿ), ಮಣ್ಣು (ಧಾರುಣಿ), ಹೊನ್ನು (ಧನ) ಈ ಮೂರರಲ್ಲಿ ನಿನಗೆ ಯಾರು ಒಳ್ಳೆದರು. ಹಿತವನ್ನುಂಟು ಮಾಡುವವರು ಎಂದು ಕೇಳಿ ಅವು ಹೇಗೆ ನಿನ್ನನ್ನು ತಿರಸ್ಕರಿಸಿ ಬಿಡುವುವು, ನಿಷ್ಫಲವಾದುವು ಎಂಬುದನ್ನು ನಾಲ್ಕು ಪದ್ಯಗಳಲ್ಲಿ ಪುರಂದರದಾಸರು ವಿವರಿಸುತ್ತಾರೆ.

ಬೇರೆ ಮನೆಯಲ್ಲಿ ಹುಟ್ಟಿದ ಸ್ತ್ರೀಯನ್ನು ಮದುವೆಯಾಗಿ ಮನೆಗೆ ಒಡತಿಯನ್ನಾಗಿ ಮಾಡಿ ಅರ್ಧಾಂಗಿ ಎಂದೆನಿಸಿ ಕೊಂಡವಳು ನೀನು ಕಾಲ ವಶನಾಗಿ ಮಡಿದರೆ ತನ್ನ ಕಣ್ಣಿನಿಂದ ನೋಡಲಾರಳು.

ಮೊದಲು ಕೋಟಿ ಕೋಟಿ ರಾಜರಾಳಿದ ಭೂಮಿಯನ್ನು ತನ್ನದೆಂದು ಶಾಸನ ಬರೆಸಿ, ಜಾಣತನದಿಂದ ಮನೆ ಕಟ್ಟಿಸಿ, ಕೋಟೆಕೊತ್ತಳ ನಿರ್ಮಿಸಿರುವ ನಿನ್ನನ್ನು ಪ್ರಾಣ ಹೋದೊಡನೆ ಮನೆ ಬಿಟ್ಟು ಹೊರಗೆ ಹಾಕುವರು. ನೀನು ಉದ್ಯೋಗ, ವ್ಯವಹಾರ, ರಾಜಸೇವೆ, ಜಾಣತನದ ನಡೆ, ಕ್ಷುಲ್ಲಕತನ, ಕಳವು, ಪರದ್ರೋಹ ಬುದ್ಧಿಯಿಂದ ಗಳಿಸಿದ ಧನವನ್ನು ಉಪಭೋಗಿಸುವವರು ಯಾರು? ಹೆಂಡಿರು ಮಕ್ಕಳು ಬಂಧು ಬಾಂಧವರು ಎರಡು ದಿನ ಚಿಂತಿಸಿ ಸುಮ್ಮನಾಗುವರು. ಜೋಕೆ ತಪ್ಪಿದ ಮೇಲೆ ಎಲ್ಲ ಅರ್ಥ ವ್ಯರ್ಥ. ಈ ಲೋಕದಲ್ಲಿ ಬದುಕಿರುವಾಗ ಗಳಿಸಿದ ಪುಣ್ಯ ಪಾಪಗಳೇ ಸಾಕಾರವಾಗಿ ನಿನ್ನ ಸಂಗಡ ಬರುವವು. ಹೆಣ್ಣು, ಹೊನ್ನು, ಮಣ್ಣು ಯಾವುದೂ ಬಾರದು.

**ಕಠಿಣ ಪದಗಳ ಅರ್ಥ**

ಸಿರಿ = ಸಂಪತ್ತು, ಅನ್ಯರಲಿ = ಬೇರೆಯವರಲ್ಲಿ, ಭಿನ್ನ = ಬೇರೆ, ರಾಯರು = ಅರಸರು, ಮುನ್ನ = ಮೊದಲು, ಶತಕೋಟಿ = ನೂರು ಕೋಟಿ, ಅಸು = ಪ್ರಾಣ, ಅರ್ಥ = ಧನ, ಸಂಪತ್ತು.

ನಡುಗನ್ನಡದಲ್ಲಿ ಸಪ್ತಮೀ ವಿಭಕ್ತಿ ಪ್ರತ್ಯಯ 'ಅಲಿ' — ಹೊಸಗನ್ನಡದಲ್ಲಿ 'ಅಲ್ಲಿ' ಉದಾಹರಣೆಗೆ: ಕಣ್ಣಿನಲಿ/ಕಣ್ಣಿನಲ್ಲಿ, ಅನ್ಯರಲಿ/ಅನ್ಯರಲ್ಲಿ ದ್ವಿತೀಯಾ ವಿಭಕ್ತಿ ಪ್ರತ್ಯಯ 'ಅ' ಉದಾಹರಣೆಗೆ ಶಾಸನವ (ಶಾಸನವನ್ನು) ಅಮ್ಮು: ಹಳಗನ್ನಡ ರೂಪ, ಅಣ್ಮು = ಶಕ್ತನಾಗು, ಸಮರ್ಥನಾಗು ಉಂಬು = ಉಣ್ಣು, ಅಸುವಳಿ = ಪ್ರಾಣ ಹೋಗು, ನೆಲವ — ಹೊಸಗನ್ನಡರೂಪ, ನೆಲನ — ಹಳಗನ್ನಡ, ನಡುಗನ್ನಡ ರೂಪ. ಚೆನ್ನಿಗ (—'ಇಗ' ಎಂಬುದು ತದ್ಧಿತ ಪ್ರತ್ಯಯ), ಬಾಹೊವು = ಬರುತ್ತವೆ.

| ತದ್ಭವ | ಸಂಸ್ಕೃತ ರೂಪಗಳು |
|---|---|
| ಸಿರಿ | ಶ್ರೀ |
| ರಾಯ | ರಾಜ |
| ಬಿನ್ನಣ | ವಿಜ್ಞಾನ |

3) ಅಂತಕನ ದೂತರಿಗೆ ಕಿಂಚಿತ್ತು ದಯವಿಲ್ಲ
ಚಿಂತೆಯನು ಬಿಟ್ಟು ಶ್ರೀ ಹರಿಯ ನೆನೆ ಮನವೆ

ದಿವ ರಾತ್ರೆಯೆನ್ನದೆ ವಿಷಯ ಲಂಪಟನಾಗಿ
ಸವಿಯೂಟಗಳನುಂಡು ಭ್ರಮಿಸಬೇಡ
ಅವನ ಕೊಂದಿವನ ಕೊಂದರ್ಥವನು ಗಳಿಸುವೊಡೆ
ಜವನ ದೂತರು ಬರುವ ಹೊತ್ತ ನೀನರಿಯೆ ॥ ೧ ॥

ಮೊನ್ನೆ ಮದುವೆಯನಾದೆ ಕರೆವುದೊಂದೆರೆಡೆಮ್ಮ
ನಿನ್ನೆ ಕೊಂಡೆನುಕ್ಷೇತ್ರ ಫಲವು ಬಹುದು
ಹೊನ್ನು ಹಣವುಂಟೆನಗೆ ಸಾಯಲಾರೆನು ಎನಲು
ಬೆನ್ನು ಬಿಡುವಳೆ ಮೃತ್ಯು ವ್ಯರ್ಥ ಜೀವಾತ್ಮಾ ॥ ೨ ॥

ಹೊಸಮನೆಯ ಕಟ್ಟಿದೆನು ಗೃಹಶಾಂತಿ ಮನೆಯೊಳಗೆ
ಬಸುರಿ ಹೆಂಡತಿ ಮಗನ ಮದುವೆ ನಾಳೆ
ಹಸನಾಗಿ ಇದೆ ಬದುಕು ಸಾಯಲಾರೆನು ಎನಲು
ಕುಸುರಿದರಿಯದೆ ಬಿಡರು ಯಮನವರು ಆಗ ॥ ೩ ॥

ಪುತ್ರ ಹುಟ್ಟಿದ ದಿವಸ ಹಾಲು ಊಟದ ಹಬ್ಬ
ಮತ್ತೊಬ್ಬ ಮಗನ ಉಪನಯನ ನಾಳೆ
ಅರ್ತಿಯಾಗದೆ ಬದುಕು ಸಾಯಲಾರೆನು ಎನಲು
ಮೃತ್ಯು ಹೆಡತಲೆಯಲ್ಲಿ ನಗುತಿರ್ಪುದರಿಯೆ ॥ ೪ ॥

ಅಡುಗೆಯನ್ನುಣಲಿಲ್ಲ ಇಷ್ಟದರುಶನವಿಲ್ಲ
ಕೊಟ್ಟ ಸಾಲವ ಕೇಳ್ವ ಹೊತ್ತನರಿಯೆ
ಕಟ್ಲೆ ತುಂಬಿದ ಮೇಲೆ ಕ್ಷಣ ಮಾತ್ರ ಇರಲಿಲ್ಲ
ಅಷ್ಟರೊಳು ಪುರಂದರ ವಿಠಲನನು ನೆನೆಮನವೆ ॥ ೫ ॥

**ಭಾವಾರ್ಥ**

ಪ್ರಪಂಚ ಬಹಳ ಸೊಗಸಾಗಿದೆ. ಇದನ್ನು ಬಿಡಲಾರೆನು ಎಂದು ಅದನ್ನು ಗಟ್ಟಿಯಾಗಿ ಹಿಡಿದವನಿಗೆ ಮರಣ ತಪ್ಪಿದುದಲ್ಲ. ಯಮನ ದೂತರು ಯಾವ ಕ್ಷಣದೊಳಗಾದರೂ ಬರಬಹುದು. ಕಾರಣ ದೇವನನ್ನು ಸ್ಮರಿಸು ಎಂದು ದಾಸರು ಈ ಕೃತಿಯಲ್ಲಿ ಹಾಡಿಕೊಂಡಿದ್ದಾರೆ.

ಯಮನ ದೂತರಿಗೆ ಎಳ್ಳಷ್ಟು ದಯವಿಲ್ಲ. ಅವರು ಯಾವ ನಿಮಿಷವಾದರೂ ಬರಬಹುದು. ಕಾರಣ ಸಂಸಾರದ ಚಿಂತೆಯನ್ನು ಬಂಧವನ್ನು ಬಿಟ್ಟು ದೇವರನ್ನು ನೆನೆಯಬೇಕು ಎಂದು ಹೇಳುತ್ತಾರೆ ದಾಸರು.

ಹಗಲಿರುಳೆನ್ನದೆ ವಿಷಯ ಲಂಪಟನಾಗಿ ಮೃಷ್ಟಾನ್ನವುಂಡು ತಿರುಗಬೇಡ. ಅವರಿವರನ್ನು ಕೊಂದು ಮೋಸ ಮಾಡಿ ದ್ರವ್ಯವನ್ನು ಗಳಿಸುವೆನೆಂದರೆ ಯಮದೂತರು ಬರುವ ಸಮಯವನ್ನು ನೀನು ಅರಿಯದಿರುವಿ. ಎಂದು ಮುಂತಾಗಿ ಸುಲಭವಾದ ಮಾತುಗಳಲ್ಲಿ ಮನುಷ್ಯನ ಪ್ರಾಪಂಚಿಕ ಬಂಧನದ ಚಿತ್ರವನ್ನು ದಾಸರು ಚೆನ್ನಾಗಿ ಚಿತ್ರಿಸಿರುವರು.

**ಕಠಿಣ ಪದಗಳ ಅರ್ಥ**

ಅಂತಕ = ಯಮ, ಕಿಂಚಿತ್ತು = ಎಳ್ಳಷ್ಟೂ, ದಿವ = ಹಗಲು, ಲಂಪಟ = ಅತಿಯಾಶೆಯುಳ್ಳವನು, ಕರೆ = ಹಿಂಡು, ಕ್ಷೇತ್ರ = ಹೊಲ, ಭೂಮಿ, ಕುಸುರಿದರಿ = ಮಾಂಸದ ಮುದ್ದೆಯಾಗುವಂತೆ ಕತ್ತರಿಸು, ಅರ್ತಿ = ಪ್ರೀತಿ, ಹೆಡತಲೆ = ತಲೆಯ ಹಿಂಭಾಗ, ಅಟ್ಟಡಿಗೆ = ತಯಾರು ಮಾಡಿದ ಅಡಿಗೆ, ಕಟ್ಲೆ = ಆಯುಷ್ಯ ನಿಯಮ, ಅವಧಿ, ಯಮ- (ಸಂಸ್ಕೃತ) ಇದರ ತದ್ಭವ 'ಜವ'.

4) ಬಿನ್ನಹಕೆ ಬಾಯಿಲ್ಲವಯ್ಯಾ

ಅನಂತ ಅಪರಾಧ ಎನ್ನಲ್ಲಿ ಇರಲಾಗಿ
ಅಸುರಾರಿ ನಿನ್ನಮರೆತೆನೋ ಕಾಯೋ ಹರಿಯೆ

ಶಿಶು ಮೋಹ ಸತಿ ಮೋಹ ಜನನಿ ಜನಕರ ಮೋಹ
ರಸಿಕ ಭ್ರಾಂತಿಯ ಮೋಹ ರಾಜ ಮನ್ನಣೆ ಮೋಹ
ಪಶು ಮೋಹ ಭೂಮೋಹ ಬಂಧುವರ್ಗದ ಮೋಹ
ಹಸನುಳ್ಳ ಆಭರಣಗಳ ಮೋಹದಿಂದ ॥ ೧ ॥

ಅನ್ನಮದ ಅರ್ಥಮದ ಅಖಿಳ ವೈಭವದ ಮದ
ಮುನ್ನ ಪ್ರಾಯದ ಮದವು ರೂಪದ ಮದವು
ತನ್ನ ಸತ್ವದ ಮದ ಧಾತ್ರಿಪ್ರಶವಾದ ಮದ
ಇನ್ನು ತನಗೆದುರಿಲ್ಲವೆಂತೆಂಬ ಮದದಿಂದ ॥ ೨ ॥

ಇಷ್ಟು ದೊರಕಿದರೆ ಮತ್ತಿಷ್ಟು ಬೇಕೆಂಬಾಸೆ
ಅಷ್ಟು ದೊರಕಿದರು ಮತ್ತಷ್ಟರಾಸೆ
ಕಷ್ಟಬೇಡೆಂಬಾಸೆ ಕಡುಸುಖವ ಕಾಂಬಾಸೆ
ನಷ್ಟಜೀವನದಾಸೆ ಪುರಂದರ ವಿಠಲ ॥ ೩ ॥

**ಭಾವಾರ್ಥ**

ತನ್ನಲ್ಲಿದ್ದ ಅಪರಾಧಗಳನ್ನು ಹೇಳಿ ಮನುಷ್ಯ ಕ್ಷಮಿಸಬೇಕೆಂದು ದೇವರಲ್ಲಿ ಬಿನ್ನವಿಸಲು ಅಂದರೆ ಪ್ರಾರ್ಥಿಸಲು ಬಾಯಿಲ್ಲ ಎನ್ನುತ್ತಾನೆ. ಅಂದರೆ ಈ ಬಾಯಿಯಲ್ಲಿ ಕೇಳುವ ಶಕ್ತಿಯಿಲ್ಲ. ಮೋಹ, ಮದ, ಆಸೆಗಳು ತನ್ನನ್ನು ಸುತ್ತಿ ಮುತ್ತಿರುವುದರಿಂದ ತಾನು ಮಾಡಿರುವ ಅಪರಾಧಗಳಿಗೆ ಎಣೆಯಿಲ್ಲ ಎನ್ನುತ್ತಾನೆ ಮಾನವ.

**ಕಠಿಣ ಪದಗಳ ಅರ್ಥ**

ಬಿನ್ನಹ = ವಿಜ್ಞಾಪನೆ, ಅಪರಾಧ = ತಪ್ಪು, ದೋಷ, ಅಸುರಾರಿ = ರಾಕ್ಷಸರ ವೈರಿ, ಹರಿ; ಶಿಶು = ಮಗು, ಸತಿ = ಹೆಂಡತಿ, ಜನನಿ = ತಾಯಿ, ಜನಕ = ತಂದೆ, ಪಶು = ದನಕರು, ಹಸನುಳ್ಳ = ಚೆನ್ನಾಗಿದ್ದ, ಪ್ರಾಯ = ಹರೆಯ, ಸತ್ವ = ಶಕ್ತಿ, ಧಾತ್ರಿ = ಭೂಮಿ, ಕಾಂಬ = ಕಾಣುವ

5) ಆವ ಕುಲವಾದರೇನು ಆವನಾದರೇನು ಆತ್ಮ
ಭಾವವರಿತ ಮೇಲೆ
ಹಸಿಕಬ್ಬು ಡೊಂಕಿಸಲು ಅದರ
ರಸ ತಾನು ಡೊಂಕೇನೋ
ವಿಷಯಾಸೆಗಳ ಬಿಟ್ಟು
ಹಸನಾದ ಗುರು ಭಕ್ತಿ ಮಾಡೋ ॥ ೧ ॥

ನಾನಾ ವರ್ಣದ ಆಕಳು ಅದು
ನಾನಾ ವರ್ಣದ ಕ್ಷೀರವೇನೋ
ಹೀನ ಕರ್ಮಗಳನ್ನು ಬಿಟ್ಟು ಹಿಗ್ಗಿ
ಜ್ಞಾನ ಒಲಿಸಿರೊ. ॥ ೨ ॥

ಕುಲದ ಮೇಲೆ ಹೋಗಬೇಡ ಮನುಜಾ
ಕುಲವಿಲ್ಲ ಜ್ಞಾನಿಗಳಿಗೆ
ವರದ ಪುರಂದರ ವಿಠಲನ ಪಾದವ
ಸೇರಿ ಮುಕ್ತನಾಗೋ ॥ ೩ ॥

**ಭಾವಾರ್ಥ**

ಆತ್ಮಜ್ಞಾನವಾದ ಮೇಲೆ ಯಾವ ಕುಲವೂ ಇಲ್ಲವೆಂಬುದನ್ನು ದಾಸರು ಸೋದಾಹರಣವಾಗಿ ವಿವರಿಸುತ್ತಾರೆ. ಕಬ್ಬು ಡೊಂಕಾಗಿದ್ದರೆ ಅದರ ರಸ ಡೊಂಕಾಗಿರುವುದಿಲ್ಲ. ಅದು ಅತ್ಯಂತ ಸಿಹಿಯಾಗಿರುತ್ತದೆ. ವಿಷಯಗಳ ಮೇಲಿನ ಆಸೆಯನ್ನು ಬಿಟ್ಟು ಗುರುಭಕ್ತಿಯನ್ನು ಮಾಡಬೇಕು. ಆಕಳುಗಳ ವರ್ಣ ಬೇರೆ ಬೇರೆಯಾಗಿದ್ದರೂ ಅವುಗಳ ಹಾಲು ಶುಭ್ರವಾಗಿರುವುದು. ಕ್ಷುಲ್ಲಕ ಕರ್ಮ ಬಿಟ್ಟು ಜ್ಞಾನ ಸಂಪಾದನೆ ಮಾಡಬೇಕು. ಜ್ಞಾನಿಗಳಿಗೆ ಕುಲವೇ ಇಲ್ಲ. ಕಾರಣ ಕುಲದ ಮೇಲೆ ವ್ಯಕ್ತಿಯನ್ನು ಪರಿಗಣಿಸಬಾರದು. ಪುರಂದರ ವಿಠಲನ ಸೇವೆ ಮಾಡಿ ಮುಕ್ತನಾಗಬೇಕು.

**ಕಠಿಣ ಪದಗಳ ಅರ್ಥ**

ಕ್ಷೀರ = ಹಾಲು.

6) ಈಸ ಬೇಕು ಇದ್ದು ಜಯಿಸ ಬೇಕು
ಹೇಸಿಗೆ ಸಂಸಾರದಲ್ಲಿ ಆಸೆ ಲೇಶ ಇಡದ ಹಾಗೆ

ತಾಮರಸ ಜಲದಂತೆ
ಪ್ರೇಮವಿಟ್ಟು ಭವದೊಳು
ಸ್ವಾಮಿ ರಾಮ ಎನುತ ಪಾಡಿ
ಕಾಮಿತ ಕೈಗೊಂಬರೆಲ್ಲ ॥ ೧ ॥

ಗೇರು ಹಣ್ಣಿನಲ್ಲಿ ಬೀಜ
ಸೇರಿದಂತೆ ಸಂಸಾರದಿ
ಮೀರಿ ಆಸೆ ಮಾಡದಂತೆ
ಧೀರ ಕೃಷ್ಣನ ಭಕುತರೆಲ್ಲ ॥ ೨ ॥

ಮಾಂಸದಾಸೆಗೆ ಮತ್ಸ್ಯ ಸಿಲುಕಿ
ಹಿಂಸೆ ಪಟ್ಟ ಪರಿಯಂತೆ
ಮೋಸ ಹೋಗದ ಹಾಗೆ ಜಗ
ದೀಶ ಪುರಂದರ ವಿಠಲನ ನೆನೆದು ॥ ೩ ॥

**ಭಾವಾರ್ಥ**

ಈಸ ಬೇಕು ಇದ್ದು ಜಯಿಸಬೇಕು. ಪ್ರಪಂಚವನ್ನು ಬಿಟ್ಟು ಸನ್ಯಾಸಿಗಳಾಗದೆ ಪ್ರಪಂಚ ಮಾಡಿ, ಅದರಲ್ಲಿದ್ದು ಅದನ್ನು ಜಯಿಸಬೇಕು. ಹೇಸಿಕೆ ರೂಪದಲ್ಲಿದ್ದ ಸಂಸಾರದಲ್ಲಿ ಆಶೆಯ ಲವಲೇಶವಿಲ್ಲದ ಹಾಗೆ ಇರಬೇಕು. ಕಮಲದ ಎಲೆಯ ಮೇಲೆ ಜಲಬಿಂದುವಿದ್ದರೂ ಅದರ ಲೇಪ ಕಮಲದೆಡೆಗೆ ಇರುವುದಿಲ್ಲ. ಕೇರು ಹಣ್ಣಿನಲ್ಲಿದ್ದ ಬೀಜದಂತಿದ್ದು ದೇವರ ನಾಮಸ್ಮರಣೆ ಮಾಡಬೇಕು. ಮೀನು ಮಾಂಸದ ಆಸೆಗೆ ಹೋಗಿ ಬಲೆಯಲ್ಲಿ ಸಿಕ್ಕು ಕಷ್ಟ ಪಡುವಂತೆ ಮಾನವನ ಗತಿಯಾಗಬಾರದು.

**ಕಠಿಣ ಪದಗಳ ಅರ್ಥ**

ತಾಮರಸ = ಕಮಲ, ಭವ = ಸಂಸಾರ, ಗೇರು ಹಣ್ಣು = ಕೇರಹಣ್ಣು, ಮರ್ತ್ಯ = ಮೀನು.
ಭಕ್ತ (ಸಂಸ್ಕೃತ) ಇದರ ತದ್ಭವ ಭಕುತ.

# ಅಭ್ಯಾಸ - 2

(1) ಈಸಬೇಕು ಇದ್ದು ಜಯಿಸಬೇಕುಎಂಬುದರ ಅರ್ಥವೇನು?
ಇದನ್ನು ವಿವರಿಸಲು ಪುರಂದರದಾಸರು ಕೊಟ್ಟ ಹೋಲಿಕೆಗಳು ಯಾವುವು?

..............................................................................................................

..............................................................................................................

..............................................................................................................

..............................................................................................................

(2) ಧರ್ಮವೇ ಜಯವೆಂಬ ದಿವ್ಯ ಮಂತ್ರವನ್ನು ಹೇಗೆ ಆಚರಣೆಯಲ್ಲಿ ತರಬೇಕು?

..............................................................................................................

..............................................................................................................

..............................................................................................................

..............................................................................................................

(3) ನಾವು ಹಿತವರೆಂದು ತಿಳಿದ ಮೂವರು ಯಾರು? ಅವರು ನಮ್ಮನ್ನು ಹೇಗೆ ತೊರೆಯುವರು?

..............................................................................................................

..............................................................................................................

..............................................................................................................

..............................................................................................................

(4) ಕೊನೆಯಲ್ಲಿ ಉಳಿಯುವ ಎರಡು ಸತ್ಯವಸ್ತುಗಳು ಯಾವುವು?

..............................................................................................................

..............................................................................................................

..............................................................................................................

..............................................................................................................

(5) ಪ್ರಪಂಚದಲ್ಲಿ ಮುಳುಗಿರುವ ವ್ಯಕ್ತಿ ಅದನ್ನು ಬಿಡದಿರಲು ಕೊಡುವ ಕಾರಣಗಳೇನು?

..............................................................................................................

..............................................................................................................

..............................................................................................................

..............................................................................................................

(6) ಬಿನ್ನಹಕೆ ಏಕೆ ಬಾಯಿಲ್ಲ?

..............................................................................................................

..............................................................................................................

..............................................................................................................

..............................................................................................................

(7) ಅಷ್ಟ ಮದಗಳೆಂದರೆ ಯಾವುವು?

..........................................................................................

..........................................................................................

..........................................................................................

..........................................................................................

(8) ಮೋಹವು ಯಾವ ಯಾವ ರೂಪದಲ್ಲಿ ತೋರುತ್ತದೆ?

..........................................................................................

..........................................................................................

..........................................................................................

..........................................................................................

(9) ಸಂಸ್ಕೃತ ಪದಗಳನ್ನು ತತ್ಸಮ ಹಾಗೂ ಅವುಗಳ ತದ್ಭವಗಳನ್ನು ಸಂಗ್ರಹಿಸಿರಿ.

..........................................................................................

..........................................................................................

..........................................................................................

..........................................................................................

## 17.4 ಸಾರಾಂಶ

ಈ ಅಂಶದಿಂದ ಕೆಳಗಿನ ಮಹತ್ತರ ಮಾತುಗಳು ನಿಮಗೆ ತಿಳಿದಿವೆ.

(1) ಪಂಡಿತರ ಸೊತ್ತಾಗಿದ್ದ ಕನ್ನಡ ಸಾಹಿತ್ಯವನ್ನು ಜನಸಾಮಾನ್ಯರಿಗೆ ಹತ್ತಿರವಾಗಿಸಲು ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ನಡೆದ ಕ್ರಾಂತಿಯ ಪರಿಣಾಮವಾಗಿ ವಚನ ಸಾಹಿತ್ಯ ಹುಟ್ಟಿಕೊಂಡಿದೆ.

ವಚನ ಎಂದರೆ ಮಾತು, ನುಡಿ ಎಂದರ್ಥ. ಜನಸಾಮಾನ್ಯರ ಮಾತಿನ ಶೈಲಿ ವಚನವಾಯಿತು. ವಚನಗಳಲ್ಲಿ ಪದ್ಯದ ಲಯ ಗದ್ಯದ ಗತಿ ಹಿತಮಿತವಾಗಿ ಬೆರೆತುಕೊಂಡಿದೆ. ವಚನಗಳಲ್ಲಿ ಚರಣಗಳ, ಪ್ರಾಸಗಳ ಕಟ್ಟುನಿಟ್ಟು ಇಲ್ಲ. ಅವುಗಳು ಕಾವ್ಯಶಕ್ತಿ, ವಿಚಾರಶಕ್ತಿ, ಅನುಭಾವದಿಂದ ದೀಪ್ತವಾಗಿವೆ. ಕಾಲದ ಕಟ್ಟಳೆಯ ಮುಂದೆ ಯಾವ ನಿಯಮವೂ ನಿಲ್ಲಲಾರದು. ಶರಣನೆಂದರೆ ಜೀವನ್ಮುಕ್ತ ಸ್ಥಿತಿಯನ್ನು ಹೊಂದಿದ ಭಕ್ತ. ಬಸವಣ್ಣನವರೇ ಕಲ್ಯಾಣದ ಶಿವಶರಣರ ಕ್ರಾಂತಿಯ ಕೇಂದ್ರ ಬಿಂದು. ವಚನಗಳು ಶಿವಭಕ್ತಿಯನ್ನು ಬೋಧಿಸುತ್ತವೆ. ಎಲ್ಲ ಮತಗಳ ಮೂಲತತ್ತ್ವ ದಯೆ. ಎನಗಿಂತ ಕಿರಿಯರಿಲ್ಲ, ಶಿವಭಕ್ತರಿಗಿಂತ ಹಿರಿಯರಿಲ್ಲ ಎಂಬುದು ಬಸವಣ್ಣನವರ ದಿವ್ಯ ಜೀವನದ ಸೂತ್ರ.

ಕ್ರಿಯಾಪದಗಳಿಲ್ಲದ ವಾಕ್ಯರಚನೆ ವಚನಗಳಲ್ಲಿ ಹೇರಳವಾಗಿ ಕಂಡುಬರುತ್ತದೆ. ದೇವಲೋಕ — ಮರ್ತ್ಯಲೋಕ, ಕುಲಹೀನ — ಕುಲಜ ಎಂಬ ಭೇದಗಳನ್ನು ಬಸವಣ್ಣನವರು ವೈಚಾರಿಕ ಹಿನ್ನೆಲೆಯಲ್ಲಿ ಪರಿಶೀಲಿಸಿದ್ದಾರೆ.

(2) ದಾಸರ ಹಾಡುಗಳನ್ನು ಕೀರ್ತನೆಗಳೆಂದು ಕರೆಯುತ್ತಾರೆ. ಅವು ವಿಷ್ಣು ಭಕ್ತಿಯನ್ನು ಬೋಧಿಸುತ್ತವೆ, ಭಕ್ತಿ ಭಾವದಿಂದ ಕೂಡಿವೆ, ನೀತಿಬೋಧಕವಾಗಿವೆ. ಕೀರ್ತನೆಗಳು ಸಂಗೀತ ಮಾಧುರ್ಯದಿಂದ ಮೆರುಗು ಪಡೆದಿವೆ. ನಾವು ಸಂಸಾರದಲ್ಲಿದ್ದರೂ ಅದಕ್ಕೆ ಅಂಟಿ ಇರಬಾರದು. ಈ ಭಾವವನ್ನು ಸ್ಪಷ್ಟಪಡಿಸಲು, ತಾಮರಸ ಜಲ, ಗೇರುಹಣ್ಣಿನಲ್ಲಿ ಬೀಜ ಹೋಲಿಕೆಗಳನ್ನು ದಾಸರು ಕೊಟ್ಟಿದ್ದಾರೆ.

ಜ್ಞಾನಿಗಳಿಗೆ ಕುಲವೇ ಇಲ್ಲ. ಕಬ್ಬು ಡೊಂಕಾದರೂ ಅದರ ರಸದಲ್ಲೇನೂ ಡೊಂಕಿಲ್ಲ, ಆಕಳುಗಳ ವರ್ಣ ಬೇರೆ ಬೇರೆಯಾಗಿದ್ದರೂ ಅವುಗಳ ಹಾಲು ಒಂದೇ ರೀತಿ ಶುಭ್ರವಾಗಿರುವುದು, ಇತ್ಯಾದಿ ಉದಾಹರಣೆಗಳು ವಿಷಯವನ್ನು ಜನಸಾಮಾನ್ಯರ ಮನಸ್ಸಿಗೆ ನಾಟುವಂತೆ ಬೋಧಿಸುತ್ತವೆ. ಪ್ರಪಂಚವನ್ನು ಬಿಟ್ಟು ಸನ್ಯಾಸಿಗಳಾಗದೆ, ಪ್ರಪಂಚ ಮಾಡಿ, ಅದರಲ್ಲಿದ್ದು ಅದನ್ನು ಜಯಿಸಬೇಕು.

ಕನ್ನಡ ಪದಗಳ ಹೊಸಗನ್ನಡ, ನಡುಗನ್ನಡ ರೂಪಗಳು ಕೀರ್ತನೆಗಳಲ್ಲಿ ದೊರೆಯುತ್ತವೆ. ಕನ್ನಡ ನುಡಿಗಳ ಉಚ್ಚಾರಣೆಗೆ ಅನುಗುಣವಾಗಿ ಉಚ್ಚರಿಸಲು ಅನುಕೂಲವಾಗುವಂತೆ ರೂಪಾಂತರಗೊಂಡ ಸಂಸ್ಕೃತ ಪದಗಳನ್ನು ತದ್ಭವಗಳೆಂದು ಕರೆಯುತ್ತಾರೆ. ಇಂತಹ ತದ್ಭವಗಳನ್ನು ವಚನ ಮತ್ತು ಕೀರ್ತನೆಗಳಲ್ಲಿ ನಾವು ಧಾರಾಳವಾಗಿ ಕಾಣುತ್ತೇವೆ.

# ಅಭ್ಯಾಸಗಳಿಗೆ ಉತ್ತರಗಳು

**ಅಭ್ಯಾಸ-1**

(1) ಕೃತ ಯುಗದಲ್ಲಿ ಶ್ರೀಗುರು ಶಿಷ್ಯನಿಗೆ ಬಡಿದು ಬುದ್ಧಿಯನ್ನು ಕಲಿಸುತ್ತಿದ್ದನು. ತ್ರೇತಾಯುಗದಲ್ಲಿ ಬೈದು ಬುದ್ಧಿಕಲಿಸತೊಡಗಿದನು. ದ್ವಾಪರದಲ್ಲಿ ಜಂಕಿಸಿ ಬುದ್ಧಿ ಹೇಳತೊಡಗಿದನು. ಕಲಿಯುಗದಲ್ಲಿ ಶ್ರೀಗುರು ಶಿಷ್ಯನಿಗೆ ಕೈಮುಗಿದು ಬುದ್ಧಿ ಕಲಿಸತೊಡಗಿದನು. ಇದು ಕಾಲದ ಕಟ್ಟಳೆ ಕಾಲಾಯತಸ್ಮೈ ನಮ:

(2) ಕಲ್ಯಾಣವೆಂಬ ಪ್ರಣತೆಯಲ್ಲಿ ಭಕ್ತಿರಸವೆಂಬ ತೈಲವನ್ನೆರೆದು ಆಚಾರವೆಂಬ ಬತ್ತಿಗೆ ಬಸವಣ್ಣನೆಂಬ ಜ್ಯೋತಿಯನ್ನು ಮುಟ್ಟಿಸಲು ಶಿವನ ಪ್ರಕಾಶ ತೊಳಗಿ ಬೆಳಗಿಸತೊಡಗಿತು. ಆ ಬೆಳಗಿನಲ್ಲಿ ಅಸಂಖ್ಯಾತ ಶರಣರು ಒಪ್ಪುತ್ತಿದ್ದರು. ಬಸವಣ್ಣನವರ ಭಕ್ತಿ, ಆಚಾರ, ಬೆಳಗು ಈ ಗುಣಗಳನ್ನು ಪ್ರಭುದೇವರು ಸುಂದರವಾಗಿ ನಿರೂಪಿಸಿರುವರು.

(3) ಬಸವಣ್ಣನವರ ದೃಷ್ಟಿಯಲ್ಲಿ ದಯವೇ ಧರ್ಮದ ಮೂಲ. ದಯವಿಲ್ಲದ ಧರ್ಮವೇ ಇಲ್ಲ. ಸಕಲ ಪ್ರಾಣಿಗಳಲ್ಲಿ ದಯ ತೋರುವುದೇ ಧರ್ಮ. ದಯಾಮೂಲಧರ್ಮ ದೇವನನ್ನು ಮೆಚ್ಚಿಸಬಲ್ಲುದು.

(4) ಎನಗಿಂತ ಕಿರಿಯರಿಲ್ಲ; ಶಿವಭಕ್ತರಿಗಿಂತ ಹಿರಿಯರಿಲ್ಲ ಎಂದ ಬಸವಣ್ಣನವರು ಕಿಂಕರ ಭಾವವನ್ನು ನಾನಾ ರೀತಿಯ ಉಪಮೆ ದೃಷ್ಟಾಂತಗಳಿಂದ ವ್ಯಕ್ತಪಡಿಸಿರುವರು. ಮೇಲಾಗಲೊಲ್ಲೆನು, ಕೀಳಾಗಲೊಲ್ಲದೆ ಎಂದು ಮತ್ತೊಮ್ಮೆ ತಮ್ಮ ಕಿಂಕರ ಭಾವವನ್ನು ಹೇಳಿ ಕೀಳಾಗಲ್ಲದೆ ಹಯನು ಕರೆವುದೆ? ಎಂದು ಕೇಳುತ್ತಾರೆ. ಹಸುವಿನ ಹಾಲನ್ನು ಹಿಂಡಬೇಕಾದರೆ ಕೆಳಗೆ ಕುಳಿತು ಹಿಂಡಬೇಕಲ್ಲದೆ ಮೇಲೆ ಕುಳಿತರಾಗದು. ಭಕ್ತಿಯ ಸತ್ಫಲಸಾಧನೆಯಾಗಬೇಕಾದರೆ ಭೃತ್ಯಾಚಾರದಿಂದ ಸಾಧ್ಯ. ಕೀಳಾಗಬೇಕು ಅಂದರೆ ಕೆಳಗುಳಿಯಬೇಕು. ಮೇಲಾದರೆ ನರಕ ಪ್ರಾಪ್ತಿ ಎಂದು ತಮ್ಮ ಕೈಂಕರ್ಯವನ್ನು ಎತ್ತಿ ತೋರಿಸಿದ್ದಾರೆ.

(5) ಬಸವಣ್ಣನವರ ದೃಷ್ಟಿಯಲ್ಲಿ ದೇವಲೋಕ — ಮರ್ತ್ಯಲೋಕವೆಂಬುದು ಬೇರಿಲ್ಲ. ಸತ್ಯವ ನುಡಿವುದೇ ದೇವಲೋಕ, ಮಿಥ್ಯವ ನುಡಿವುದೇ ಮರ್ತ್ಯಲೋಕ; ಆಚಾರವೇ ಸ್ವರ್ಗ; ಅನಾಚಾರವೇ ನರಕ. ಮರ್ತ್ಯ ಲೋಕವೆಂಬುದು ಸೃಷ್ಟಿಕರ್ತನ ಕಾರ್ಯಾಗಾರ. ಇಲ್ಲಿ ಸಲ್ಲುವವರು ಎಲ್ಲೆಲ್ಲಿಯೂ ಸಲ್ಲುವರು.

(6) ಶ್ರೀಮಂತಿಕೆಯ ಪಿಶಾಚಿ ಬಡಿದವರನ್ನು ಮಾತನಾಡಿಸುವುದೇ ಕಷ್ಟ. ಅವರು ಶ್ರೀಮಂತಿಕೆಯ ಗರ್ವದಿಂದ ಉಬ್ಬಿ ಬಿರ್ರನೆ ಬಿಗಿದಿರುವರು. ಹಾವು ಕಚ್ಚಿದವರನ್ನು ಭೂತ ಬಡಿದವರನ್ನು ಮಾತನಾಡಿಸಲು ಸಾಧ್ಯ. ಬಡತನವೆಂಬ ಮಂತ್ರವಾದಿ ಬಂದರೆ ಮಾತ್ರ ಶ್ರೀಮಂತರು ಬಾಯ್ದೆಗೆಯುವರು.

(7) ಬಸವಣ್ಣನವರ ಅಭಿಮತದಂತೆ ಕೊಲ್ಲುವವನೇ ಮಾದಿಗ, ಹೊಲಸು ತಿಂಬುವನೇ ಹೊಲೆಯ. ಉಚ್ಚಕುಲದವನೆಂದು ಕರೆಯಿಸಿಕೊಂಡವನು ಹೊಲಸು ತಿಂದರೆ, ಪ್ರಾಣಿಗಳನ್ನು ಕೊಂದರೆ ಅವನೇ ಹೊಲೆಯ. ಸಕಲ ಜೀವಾತ್ಮರ್ಲೇಸನ್ನು ಬಯಸುವವನೇ ಕುಲಜನು. ಕುಲವೆಂಬುದು ಅವನ ಜನ್ಮದಿಂದ ಬರತಕ್ಕದ್ದಲ್ಲ. ಜನ್ಮದಿಂದ ಅವನಿಗೆ ಪ್ರಾಪ್ತವಾದುದು ಮನುಷ್ಯ ಜಾತಿ ಮಾತ್ರ.

**ಅಭ್ಯಾಸ - 2**

(1) 'ಈಸಬೇಕು ಇದ್ದು ಜಯಿಸಬೇಕು' ಎಂದರೆ ಪ್ರಪಂಚದ ಪ್ರವಾಹವನ್ನು ಬಿಟ್ಟು ಸನ್ಯಾಸಿಯಾಗಿ ಹೋಗದೆ ಅದರಲ್ಲಿದ್ದು ಅದನ್ನು ಈಸಿ ಜಯಿಸಬೇಕು, ಎಂದು ಅರ್ಥ. ಅಂದರೆ ಈ ಸಂಸಾರ ಸುಖದ ಮೇಲೆ ಆಶೆಯ ಲವಲೇಶವಿಲ್ಲದ ಹಾಗೆ ಇರಬೇಕು.

ತಾಮರಸ ಜಲ, ಗೇರುಹಣ್ಣಿನ ಬೀಜಗಳ ಹೋಲಿಕೆ ಕೊಟ್ಟಿರುವರು. ಕಮಲದೆಲೆಯ ಮೇಲೆ ಜಲಬಿಂದುವಿದ್ದೂ ಅದಕ್ಕೆ ಅಂಟುವುದಿಲ್ಲ. ಗೇರುಬೀಜ ಆಧಾರಕ್ಕಾಗಿ ಹಣ್ಣಿಗೆ ಅಂಟಿದ್ದರೂ ಹಣ್ಣಿನಿಂದ ಹೊರಗಿರುತ್ತದೆ.

(2) ಧರ್ಮವೇ ಜಯವೆಂಬ ದಿವ್ಯ ಮಂತ್ರವನ್ನು ಆಚರಣೆಯಲ್ಲಿ ತರಬೇಕಾದರೆ ಕೆಳಗಿನಂತೆ ಆಚರಿಸಬೇಕೆಂದು ಪುರಂದರದಾಸರು ಹೇಳಿರುವರು :

ನಮಗೆ ವಿಷವನ್ನು ಕೊಟ್ಟವರಿಗೆ ನಾವು ಷಡ್ರಸದೂಟವನ್ನು ನೀಡಬೇಕು. ದ್ವೇಷ ಮಾಡಿದವರನ್ನು ಪೋಷಿಸಬೇಕು ; ಹುಸಿ ಮಾಡಿ ಕೆಡಿಸುವಂತಹವರನ್ನು ಸ್ತೋತ್ರ ಮಾಡಬೇಕು. ನಮಗೆ ಮೋಸ ಮಾಡಿದವರ ಹೆಸರನ್ನು ಮಗನಿಗಿಡಬೇಕು. ನಮ್ಮ ಬೆನ್ನ ಹಿಂದೆ ನಿಂದಿಸುವವರನ್ನು ನಾವು ನಮಸ್ಕರಿಸಬೇಕು. ಕೊಂದ ವೈರಿಯ ಮನೆಗೆ ಸ್ವತ: ನಾವು ನಡೆದುಹೋಗಬೇಕು. ನಮ್ಮಲ್ಲಿ ದೋಷವನ್ನೆಣಿಸುವವರೊಡನೆ ಗೆಳೆತನ ಮಾಡಬೇಕು. ನಮ್ಮನ್ನು ಕಂಡು ಸಹಿಸದವರನ್ನು ನಾವು ಕರೆಯಬೇಕು. ಒಟ್ಟಿನಲ್ಲಿ ನಮಗೆ ಅಪಕಾರ ಮಾಡಿದವರಿಗೆ ನಾವು ಉಪಕಾರ ಮಾಡಬೇಕು. ಅವರು ನಮಗೆ ಕೇಡುಕು ಮಾಡಿದರೂ ಆ ಕೇಡಿನ ಭಾವನೆ ನಮ್ಮಲ್ಲಿ ಇಲ್ಲದಿರಬೇಕು.

(3) ನಾವು ಹಿತವರೆಂದು ತಿಳಿದುಕೊಂಡ ಮೂವರೆಂದರೆ ನಾರಿ, ಧಾರುಣಿ, ಸಂಪತ್ತು. ಕೈಹಿಡಿದ ಹೆಂಡತಿ ಕೊನೆಗೆ ನಮ್ಮನ್ನು ಕಣ್ಣುತೆರೆದು ನೋಡುವುದಿಲ್ಲ. ನಾವು ಕಟ್ಟಿದ ಅರಮನೆಯಿಂದ ಪ್ರಾಣಹೋದ ಮರುಕ್ಷಣ ಹೊರಗೆ ಹಾಕುವರು.

(4) ನಾವು ಬದುಕಿದ್ದಾಗ ಈ ಲೋಕದಲ್ಲಿ ಗಳಿಸಿದ ಪುಣ್ಯ ಪಾಪಗಳೆರಡೇ ಕೊನೆಗೆ ನಮ್ಮೊಡನೆ ಬರುವವು.

(5) ಪ್ರಪಂಚದಲ್ಲಿ ಮುಳುಗಿದ ವ್ಯಕ್ತಿ ಒಂದೊಂದು ಕಾರಣವನ್ನು ಮುಂದೆ ಮಾಡುತ್ತಾ ಇದನ್ನು ಹೇಗೆ ಬಿಡಲಿ ಎಂದು ಅದಕ್ಕೆ ಮತ್ತೆ ಮತ್ತೆ ಅಂಟಿಕೊಳ್ಳುತ್ತಾನೆ. ಮೊನ್ನೆ ಮದುವೆಯಾಗಿದ್ದೇನೆ, ನಿನ್ನೆ ಹೊಲವನ್ನು ಕೊಂಡಿದ್ದೇನೆ, ಎಮ್ಮೆ ಹಿಂಡುತ್ತಿವೆ, ಫಲ ಬರುತ್ತದೆ, ಇಷ್ಟೊಂದು ಧನವುಂಟು ಸಾಯಲಾರೆನು, ಈಗ ಹೊಸ ಮನೆಯನ್ನು ಕಟ್ಟಿಸಿದ್ದೇನೆ, ನಾಳೆ ಅದರ ಗೃಹ ಶಾಂತಿ, ಹೆಂಡತಿ ಬಸುರಿ, ನಾಳೆ ಮಗನ ಮದುವೆ, ಇಂದು ಮಗನು ಹುಟ್ಟಿದ ದಿವಸ, ನಾಳೆ ಮತ್ತೊಬ್ಬ ಮಗನ ಉಪನಯನ ಸಾಯಲಾರೆನು ಎಂದು ಬದುಕಿನ ನೂರಾರು ಆಮಿಷಗಳನ್ನು ವ್ಯಕ್ತಿ ಮುಂದೆ ಮಾಡುತ್ತಾನೆ.

(6) ತನ್ನಲ್ಲಿ ಅನಂತ ಅಪರಾಧಗಳು ಇರುವುದರಿಂದ ಪ್ರಾರ್ಥನೆಗೆ ಬಾಯಿ ಇಲ್ಲದಾಗಿದೆ.

(7) ಅನ್ನ ಮದ, ಅರ್ಥ ಮದ, ವೈಭವ ಮದ, ಪ್ರಾಯ ಮದ, ರೂಪ ಮದ, ಸತ್ವ ಮದ, ಭೂಮಿ ಮದ, ತನಗೆ ಎದುರಿಲ್ಲ ಎಂಬ ಮದ ಇವು ಅಷ್ಟ ಮದಗಳು. ಅನ್ನ, ಅರ್ಥ, ಯೌವನ, ಸ್ತ್ರೀ, ವಿದ್ಯೆ ಕುಲ, ರೂಪ, ಉದ್ಯೋಗ ಇವುಗಳಿಗೆ ಸಂಬಂಧಿಸಿದವು ಅಷ್ಟ ಮದಗಳೆಂದು ಸಾಮಾನ್ಯವಾದ ತಿಳಿವಳಿಕೆ.

(೮) ಶಿಶು ಮೋಹ, ಸತಿ ಮೋಹ, ತಾಯಿ ತಂದೆಗಳು ಮೋಹ ರಾಜ ಮನ್ನಣೆಯ ಮೋಹ, ಭೂಮಿ ಸೀಮೆಯ ಮೋಹ, ಬಂಧುವರ್ಗದ ಮೋಹ, ಆಭರಣಗಳ ಮೋಹ — ಹೀಗೆ ನಾನಾ ಬಗೆಯಾಗಿ ಮೋಹವು ಮಾನವನನ್ನು ಸೆಳೆಯುತ್ತದೆ.

(೯)

| **ತತ್ಸಮ** (ಸಂಸ್ಕೃತ) | **ತದ್ಭವ** |
|---|---|
| ಗೃಹ | ಗರ |
| ಶ್ರೀ | ಸಿರಿ |
| ರಾಜ | ರಾಯ |
| ವಿಜ್ಞಾನ | ಬಿನ್ನಣ |
| ಯಮ | ಜವ |
| ಪ್ರಾಯ | ಹರಯ |
| ಭಕ್ತ | ಭಕುತ |